# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಮಾನ್ಯ ಸದಸ್ಯರ ಹೆಸರು | ಶ್ರೀ ಐವನ್ ಡಿ 'ಸೋಜಾ<br>(ವಿಧಾನ ಸಭಾಕ್ಷೇತ್ರದಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 349 |
| ಉತ್ತರಿಸಬೇಕಾದ ದಿನಾಂಕ | 13.08.2025 |
| ಉತ್ತರಿಸಬೇಕಾದ ಸಚಿವರು | ವಸತಿ, ವಕ್ಫ್ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ವಸತಿ ಇಲಾಖೆಯಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಿರ್ಮಾಣ ಮಾಡಿದ ಒಟ್ಟು ಮನೆಗಳೆಷ್ಟು ; | ರಾಜೀವ್ ಗಾಂಧಿ ವಸತಿ ನಿಗಮ :<br><br>ಕಳೆದ 5 ವರ್ಷಗಳ ಅವಧಿಯಲ್ಲಿ ಅಂದರೆ 2019-20ನೇ ಸಾಲಿನಿಂದ 2024-25ನೇ ಸಾಲಿನ ವರೆಗೆ ರಾಜೀವ್ ಗಾಂಧಿ ವಸತಿ ನಿಗಮದಿಂದ ವಿವಿಧ ವಸತಿ ಯೋಜನೆಗಳಡಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 10,407 ಮನೆಗಳನ್ನು ನಿರ್ಮಿಸಲು ಮಂಜೂರು ಮಾಡಲಾಗಿದೆ. ಈ ಪೈಕಿ 7,452 ಮನೆಗಳ ಕಾಮಗಾರಿ ಪೂರ್ಣಗೊಂಡಿದ್ದು, 1,648 ಮನೆಗಳ ಕಾಮಗಾರಿ ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿವೆ.<br><br>ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ:<br>ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಗೆ ರಾಜ್ಯ ಸರ್ಕಾರದ ವಸತಿ ಯೋಜನೆಗಳಾದ ಡಾ\|\| ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆ ಮತ್ತು ವಾಜಪೇಯಿ ನಗರ ವಸತಿ ಯೋಜನೆಯನ್ನು ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಆವಾಸ್ ಯೋಜನೆಯೊಂದಿಗೆ ಸಂಯೋಜಿಸಿಕೊಂಡು ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ನಗರದಲ್ಲಿ 500 ಮನೆಗಳನ್ನು ನಿರ್ಮಿಸಲು ಮಂಜೂರಾತಿ ದೊರಕಿರುತ್ತದೆ. |
| ಆ) | ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯ ಮಧ್ಯ ಗ್ರಾಮದಲ್ಲಿ ಇಲಾಖೆ ವತಿಯಿಂದ ನಿರ್ಮಾಣ ಮಾಡಲು ಉದ್ದೇಶಿಸಿದ ಬಡಾವಣೆಯು ಯಾವ ಹಂತದಲ್ಲಿದೆ ; ಇದರ ವಿತರಣೆಯಲ್ಲಿ ವಿಳಂಬ ಆಗಲು ಕಾರಣವೇನು ; ಯಾವಾಗ ಯೋಜನೆ ಪೂರ್ಣಗೊಳ್ಳುವುದು ; (ವಿವರ ನೀಡುವುದು) | ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಮಧ್ಯ ಗ್ರಾಮದ ಸರ್ವೆ ನಂ. 211 ಪಿ 4 ರಲ್ಲಿ ಕೊರಗ ಸಮುದಾಯದ ನಿವೇಶನ ರಹಿತ ಫಲಾನುಭವಿಗಳಿಗೆ 27 ಮನೆಗಳ ನಿರ್ಮಾಣ ಕೈಗೆತ್ತಿಕೊಳ್ಳಲಾಗಿದೆ. ಈ ಪೈಕಿ 21 ಮನೆಗಳು ಪೂರ್ಣಗೊಂಡಿದ್ದು, 6 ಮನೆಗಳು ಪ್ರಗತಿಯಲ್ಲಿವೆ.<br>ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಇಡ್ಯಾ ಗ್ರಾಮದ ಸರ್ವೆ ನಂ 16ಪಿ1 ರಲ್ಲಿ ಜಿ+3 ಮಾದರಿಯಲ್ಲಿ 600 ಮನೆಗಳನ್ನು ಮತ್ತು ಸೂರತ್ಕಲ್ ಗ್ರಾಮದ ಸರ್ವೆ ನಂ.108/1ಎ, 1ಬಿ ರಲ್ಲಿ ರಲ್ಲಿ ಜಿ+3 ಮಾದರಿಯಲ್ಲಿ 192 ಮನೆಗಳನ್ನು ಒಟ್ಟಾರೆಯಾಗಿ 792 ಮನೆಗಳನ್ನು ನಿರ್ಮಾಣ ಮಾಡಲು ಉದ್ದೇಶಿಸಿದ್ದು, ಈ ಪೈಕಿ ಪ್ರಸ್ತುತ 752 ಮನೆಗಳ ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದೆ.<br><br>ಸದರಿ ಯೋಜನೆಗಳ ಕಾಮಗಾರಿಯು ಈ ಕೆಳಗಿನ ಕಾರಣಗಳಿಂದ ವಿಳಂಬವಾಗಿರುತ್ತದೆ:-<br>1. ಸದರಿ ಯೋಜನೆಗಳ ಒಟ್ಟು 792 ಫಲಾನುಭವಿಗಳ ಪೈಕಿ ಕೇವಲ 322 ಫಲಾನುಭವಿಗಳು ಮಾತ್ರ ಪೂರ್ಣ ವಂತಿಕೆ ಪಾವತಿ ಮಾಡಿದ್ದು, ಉಳಿಕೆ ಫಲಾನುಭವಿಗಳು ವಂತಿಕೆ ಪಾವತಿಸಲು ಮುಂದೆ ಬರುತ್ತಿಲ್ಲ. |

| | | |
|---|---|---|
| | | 2. ಸದರಿ ಯೋಜನೆಗಳ ಫಲಾನುಭವಿಗಳಿಗೆ ಬ್ಯಾಂಕ್‌ಗಳು ಸಾಲ ಸೌಲಭ್ಯ ಒದಗಿಸಲು ಮುಂದೆ ಬರುತ್ತಿಲ್ಲ. |
| ಇ) | ಈ ಯೋಜನೆಗೆ ಒಟ್ಟು ಎಷ್ಟು ಅರ್ಜಿಗಳು ಬಂದಿವೆ ಈ ಬಡಾವಣೆ ಯಾವಾಗ ನಿರ್ಮಾಣ ಆಗುತ್ತದೆ; ಈ ಯೋಜನೆಯ ಸಂಪೂರ್ಣ ವೆಚ್ಚ ಎಷ್ಟು; ಪ್ರತಿ ನಿವೇಶನಕ್ಕೆ ತಗಲುವ ವೆಚ್ಚ ಎಷ್ಟು ; (ವಿವರ ನೀಡುವುದು) | ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ನಿವೇಶನ ರಹಿತರ ಒಟ್ಟು 7015 ಅರ್ಜಿಗಳು ಬಂದಿರುತ್ತದೆ.<br><br>**ಯೋಜನಾ ವೆಚ್ಚದ ವಿವರ**<br>1. ಇಡ್ಯಾ ಗ್ರಾಮದ ಸರ್ವೆ ನಂ 16ಪಿ1 ರಲ್ಲಿ ಜಿ+3 ಮಾದರಿಯಲ್ಲಿ ನಿರ್ಮಿಸುತಿರುವ 600 ಮನೆಗಳ ಯೋಜನಾ ಮೊತ್ತ ರೂ.40.00 ಕೋಟಿಗಳಾಗಿದ್ದು, (ಮೂಲಭೂತ ಸೌಕರ್ಯವನ್ನು ಒಳಗೊಂಡಂತೆ) ಆದರೆ ಪ್ರತಿ ಮನೆಗೆ ತಗಲುವ ವೆಚ್ಚ ರೂ. 5.00 ಲಕ್ಷಗಳಾಗಿರುತ್ತದೆ.<br><br>2. ಸುರತ್ಕಲ್ ಗ್ರಾಮದ ಸರ್ವೆ ನಂ 108/1ಎ, 1ಬಿ ರಲ್ಲಿ ಜಿ+3 ಮಾದರಿಯಲ್ಲಿ ನಿರ್ಮಿಸುತಿರುವ 192 ಮನೆಗಳ ಯೋಜನಾ ಮೊತ್ತ ರೂ.14.44 ಕೋಟಿಗಳಾಗಿದ್ದು, (ಮೂಲಭೂತ ಸೌಕರ್ಯವನ್ನು ಒಳಗೊಂಡಂತೆ) ಆದರೆ ಪ್ರತಿ ಮನೆಗೆ ತಗಲುವ ವೆಚ್ಚ ರೂ. 6.95 ಲಕ್ಷಗಳಾಗಿರುತ್ತದೆ. |
| ಈ) | ವಸತಿ ಇಲಾಖೆಯಿಂದ ಜಿಲ್ಲೆಯಲ್ಲಿ ಎಷ್ಟು ಮನೆಗಳನ್ನು ನಿರ್ಮಿಸಲು ಯೋಜನೆ ಹಾಕಿಕೊಳ್ಳಲಾಗಿದೆ ? (ವಿವರ ನೀಡುವುದು) | ಪ್ರಸಕ್ತ ಸಾಲಿನಲ್ಲಿ ಯಾವುದೇ ಹೊಸ ಮನೆಗಳ ಗುರಿಯನ್ನು ಹಮ್ಮಿಕೊಂಡಿರುವುದಿಲ್ಲ.<br><br>ಪ್ರತಿ ವರ್ಷ ಆಯವ್ಯಯದಲ್ಲಿ ನೀಡಲಾಗುವ ಅನುದಾನಕ್ಕೆ ಅನುಗುಣವಾಗಿ ವಸತಿ ಯೋಜನೆಗಳಡಿಯಲ್ಲಿ ಗುರಿಯನ್ನು ನಿಗದಿಪಡಿಸುತ್ತಿದ್ದು, ಸದರಿ ಗುರಿಗೆ ಎದುರಾಗಿ ವಸತಿ ಯೋಜನೆಗಳಡಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಿ ಯೋಜಿತ ಪ್ರಮಾಣದಲ್ಲಿ ವಸತಿ ಸೌಲಭ್ಯವನ್ನು ಒದಗಿಸಲಾಗುತ್ತಿದೆ. |

ಸಂಖ್ಯೆ: ವಇ 151 ಹೆಚ್‌ಎಫ್‌ಎ 2025]

(ಬಿ.ಝಡ್. ಜಮೀರ್ ಅಹಮದ್ ಖಾನ್)
ವಸತಿ, ವಕ್ಫ್, ಮತ್ತು ಅಲ್ಪ ಸಂಖ್ಯಾತರ
ಕಲ್ಯಾಣ ಸಚಿವರು.